# ಪೊಲೀಸ್‌ಮಾಹಿತಿದಾರ, ಕ್ರೂರ ಭೂಮಾಲಿಕ, ಕೋಮುವಾದಿ,ಅತ್ಯಾಚಾರಿ, ಜನ ದ್ರೋಹಿ ಕೇಶವಯಡಿಯಾಳನ ನಿರ್ಮೂಲನೆಯನ್ನು ಎತ್ತಿ ಹಿಡಿಯೋಣ !

# ಪ್ರಜಾ ಹೋರಾಟವನ್ನು ತೀವ್ರ ಗೊಳಿಸೋಣ !

***ಆತ್ಮೀಯ ರೈತ-ಕೂಲಿಕಾರ್ಮಿಕರೇ,ಮಹಿಳೆಯರೇ,***

ಕ್ರೂರ ಭೂಮಾಲಿಕ,ಪೊಲೀಸ್ ಮಾಹಿತಿದಾರ ಕೇಶವ ಯಡಿಯಾಳನು ನಮ್ಮ ಪಕ್ಷದ ವಿರುದ್ಧ,ವರಾಹಿದಳದ ಕಾರ್ಯಚಟುವಟಿಕೆಯ ಆರಂಭದಿಂದಲೂ ಪೊಲೀಸರಿಗೆ ಮಾಹಿತಿ ನೀಡುತ್ತಾ ಬಂದಿದ್ದಾನೆ. ನಮ್ಮ ದಳವು ದಿನಾಂಕ ೨೩-೬-೨೦೦೫ ರ ಬೆಳಿಗ್ಗೆ ದೇವರ ಬಾಳುವಿನ ಕಡೆಗೆ ಚಲಿಸುತ್ತಿರುವುದನ್ನು ಗಮನಿಸಿ ಪೊಲೀಸರಿಗೆ ಮಾಹಿತಿನೀಡಿದ್ದಲ್ಲದೆ ಪೊಲೀಸರನ್ನು ಅರ್ಧದಾರಿಯಲ್ಲೇ ಭೇಟಿಮಾಡಿ ವಿವರವಾದ ಮಾಹಿತಿ ನೀಡಿದ್ದನು. ಇದರಿಂದಾಗಿ ನಮ್ಮ ವರಾಹಿ ದಳದ ಸಂಗಾತಿಗಳಾದ ಕಾ|| ಉಮೇಶ್(ಕಿರಣ್) ಕಾ||ಅಜೀತ್ ಕುಸುಬಿ(ಆಕಾಶ್) ರವರು ದೇವರಬಾಳುವಿನ ರಾಮನಹಕ್ಲು ಮನೆಗೆ ಸುರಿಯುವ ಮಳೆಯಲ್ಲೇ ಜನರನ್ನು ಭೇಟಿಮಾಡಲು ಹೋದಾಗ ಕೇಶವ ಯಡಿಯಾಳನು ನೀಡಿದ್ದ ಖಚಿತಮಾಹಿತಿಯನ್ನು ಆಧರಿಸಿ ಈ ಊರಿನ ಬೇರೆ ಬೇರೆ

ಮನೆಗಳಲಿ ಹೊಂಚುಹಾಕಿ ಕುಳಿತಿದ್ದ ಪೊಲೀಸರು ನಮ್ಮ ಸಂಗಾತಿಗಳನ್ನು ಸುಳ್ಳು ಎನ್‌ಕೌಂಟರ್‌ನಲ್ಲಿ ಕಗ್ಗೊಲೆಗೈದರು, ಇದಕ್ಕೆ ಈತನೇ ಪ್ರಮುಖ ಕಾರಣನಾಗಿದ್ದನು. ಅಲ್ಲದೆ ಈತನು ಆ ಇಬ್ಬರು ಸಂಗಾತಿಗಳ ಶವಗಳನ್ನು ಎತ್ತಲು ತನ್ನ ಮನೆಯಿಮದಲೇ ಛಾಪೆಗಳನ್ನು ತಂದು ತಾನೇ ಸುತ್ತಿದ್ದಲ್ಲದೆ ಜೇಪಿಗೆ ಹಾಕುವವರೆಗೂ ಪೊಲೀಸರಿಗೆ ಸಹಕರಿಸಿದ್ದನು.

ಈತನೊಬ್ಬ ಕ್ರೂರಭೂಮಾಲಿಕನಾಗಿದ್ದು ವಿವಿದೆಡೆ ಸುಮಾರು ೫೦ ಎಕರೆಯಷ್ಟು ಜಮೀನು ಹೊಂದಿದ್ದರೂ ಕೂಲಿ-ಕಾರ್ಮಿಕರನ್ನು ಅತೀ ಕಡಿಮೆ ಕೂಲಿಗೆ ಅಂದರೆ ೨೦-೨೫ ರೂಪಾಯಿಗೆ ದಿನವಿಡೀ ಬೆಳಿಗ್ಗೆ 8-00 ರಿಂದ 5.30-6-00 ಗಂಟೆವರಗೆ ಜೀತದ ರೀತಿ ಅಮಾನುಷವಾಗಿ ದುಡಿಸಿ ಕೊಳ್ಳುತ್ತಿದ್ದ ಶೋಷಕ ಭೂಮಾಲಿಕ. ಆದರೆ ಜನರು ಕೊಳ್ಳುವ ಪ್ರತಿಯೊಂದು ವಸ್ತುವಿನ ಬೆಲೆಗಳೂ ಗಗನಕ್ಕೇರುತ್ತಿರುವ ಇವತ್ತಿನ ಸಂದರ್ಭದಲ್ಲಿ ಇವನು ಕೊಡುವ ಬಿಡಿಗಾಸಿನ ಕೂಲಿ ಒಂದೊತ್ತಿನ ಊಟಕ್ಕೂ ಸಾಕಾಗದಿರುವಾಗ ಇವನಿಂದ ತೆಗೆದುಕೊಂಡ ಸಾವಿರಾರು ರೂಪಾಯಿ ಸಾಲ ತೀರಿಸುವುದಾದರು ಹೇಗೆ? ಸಾಲಕ್ಕೆ ಬಡ್ಡಿ-ಚಕ್ರಬಡ್ಡಿ ಬೇರೆ ಹಾಕಿ ಜೀವನ ಪೂರ್ತಿ ತನ್ನ ಮನೆಯಲ್ಲೇ ಜೀತ ಮಾಡಿ ಬದುಕುವಂತೆ ಬಂಧಿಸಿಟ್ಟಿದ್ದ ಕ್ರೂರ ಭೂಮಾಲೀಕ. ಇಷ್ಟೆಲ್ಲಾ ಸಾಲದೆಂಬಂತೆ ಈತನು ಬಡ-ಮದ್ಯಮ ರೈತರಿಂದ ಅತೀಕಡಿಮೆ ಬೆಲೆಗೆ ಅಡಿಕೆಯನ್ನು ಖರೀದಿಸಿ ದುಪ್ಪಟ್ಟು ಲಾಭಕ್ಕಾಗಿ ಜನರನ್ನು ಮೋಸಗೋಳಿಸುತ್ತಾ ಬಂದ ದಲ್ಲಾಳಿಯೂ ಆಗಿದ್ದನು.

ಕೇಶವ ಯಡಿಯಾಳನು ಮನುಧರ್ಮದ ಕಟ್ಟಾ ಪ್ರತಿಪಾದಕನೂ ಆಗಿದ್ದು,ದಲಿತ ಹಾಗು ಹಿಂದುಳಿದ ಜಾತಿಯ ದುಡಿಯುವ ಜನರನ್ನು ಜಾತಿಯ ಆಧಾರದಲ್ಲಿ ಅತ್ಯಂತ ಕೀಳಾಗಿ ನಡೆಸಿಕೊಳ್ಳುತ್ತಿದ್ದ

ಬ್ರಾಹ್ಮಣಶಾಹಿ ಪ್ರತಿಪಾದಕನೂ ಆಗಿದ್ದನು. ಮಹಿಳೆಯರನ್ನು ಬೋಗದ ವಸ್ತುವಿನಂತೆ ಲೈಂಗಿಕ ದೃಷ್ಟಿಯಲ್ಲಿ ಅಗೌರವದಿಂದ ನೋಡುತ್ತಿದ್ದನಲ್ಲದೆ ಕೆಲವು ಮಹಿಳೆಯರನ್ನು ತನ್ನ ಕಾಮತೃಷೆಗಾಗಿ ಹಣ ಇತ್ಯಾದಿ ಆಮಿಷ ಒಡ್ಡಿ, ಮಹಿಳೆಯರ ಸಾಮಾಜಿಕ ಅಭದ್ರತೆಯನ್ನೇ ಬಂಡವಾಳ ಮಾಡಿಕೊಂಡು ಬೆದರಿಕೆ ಮೂಲಕ ಕೂಡ ಅತ್ಯಾಚಾರ ನಡೆಸುತ್ತಾ ಬಂದವನು. ಕೆಲವು ಮಹಿಳೆಯರ ಜೊತೆ ಅನೃತಿಕ ಸಂಬಂಧ ಹೊಂದಿದ್ದ ಲಂಪಟನಿವನು. ಇವನ ಈ ನೀಚ ಕೆಲಸಕ್ಕೆ ಹೋಗುವಾಗ ನಾಯಿಗಳು ಬೋಗಳುತಿದ್ದವೆಂದು ವಿಷಹಾಕಿ ಕೊಂದ ಕ್ರೂರಿಯಾಗಿದ್ದನು.

ದೇವರ ಬಾಳುವಿನ ರೈತರೊಬ್ಬರ ತೋಟದಲ್ಲಿ ಅಡಿಕೆ ಮರಗಳಿಗೆ ಸಿಂಪಡಿಸಲೆಂದು ಔಷಧಿ ಹಾಕಿಟ್ಟಿದ್ದ ಬ್ಯಾರಲ್‌ನಲ್ಲಿ ವೈಯಕ್ತಿಕ ದ್ವೇಷಕ್ಕಾಗಿ ತಾನೇ ಕಳೆನಾಶಕ ಬೆರೆಸಿದ್ದರಿಂದಾಗಿ ಸುಮಾರು ೩ ಎಕರೆಯಷ್ಟು ಅಡಿಕೆ ಬೆಳೆ ನಾಶವಾಗಿದೆ. ಇವನ ಈ ದುಷ್ಟ ಕೃತ್ಯವನ್ನು ಮುಚ್ಚಿ ಹಾಕುವುದಕ್ಕಾಗಿ "ಇದು ನಕ್ಸಲೀಯರು ಮಾಡಿರುವುದೆಂದು" ಅಪಪ್ರಚಾರ ಕೂಡ ಮಾಡಿದ್ದನು. ಆದರೆ ಇದು ಕೇಶವ ಯಡಿಯಾಳನೇ ಮಾಡಿದ್ದೆಂದು ಜನತೆಗೆ ಬಹಿರಂಗಗೊಂಡಿತು.

ಈತನೊಬ್ಬ ಹಿಂದು ಫ್ಯಾಸಿಸ್ಟ್ ಬಿ.ಜೆ.ಪಿ ಪಕ್ಷದ ಸಕ್ರೀಯ ಮುಖಂಡನಾಗಿದ್ದುಕೊಂಡು ನಮ್ಮ ಪಕ್ಷದ ವಿರುದ್ದ ನಿರಂತರ ಅಪಪ್ರಚಾರ ಮಾಡುತ್ತಾ ದುಡಿಯುವ ಜನರನ್ನು ಭೂಮಾಲೀಕರ ಅಮಾನುಷ ಶೋಷಣೆಯನ್ನು ಅರ್ಥಮಾಡಿಕೊಂಡು ಕ್ರಾಂತಿಕಾರಿ ಚಳುವಳಿಯಲ್ಲಿ ಒಗ್ಗೂಡದಂತೆ ದಿಕ್ಕು ತಪ್ಪಿಸಲು ನಿರಂತರ ಪ್ರಯತ್ನ

ಮಾಡುತ್ತಾ ಬಂದವನು. ಪೊಲೀಸರು ಕರೆದಿದ್ದ ಜನಸಂಪರ್ಕ ಸಭೆಯೊಂದರಲ್ಲಿ ನಮ್ಮ ಪಕ್ಷದ ದಳಗಳಿಗೆ ಜನರ್‍ಯಾರು ಊಟ ಕೊಡಬಾರದು,ಸಹಕರಿಸಬಾರದೆಂದು ಮತ್ತು ನಮ್ಮ ದಳ ಕಂಡಕೂಡಲೇ ಪೊಲೀಸರಿಗೆ ಮಾಹಿತಿ ನೀಡಬೇಕೆಂದು ಜನರಿಗೆ ತಾಕೀತುಮಾಡಿ,ಗೊಂದಲ ಹಾಗೂ  ಭಯದ ವಾತಾವರಣ ಉಂಡುಮಾಡಲು ಪ್ರಯತ್ನಿಸಿದನು, ಆದರೆ ಇವನ ಈ ಜನವಿರೋಧಿ ಕೃತ್ಯಗಳನ್ನು ಪ್ರಶ್ನೆಮಾಡಿ ಜನರು ಆಕ್ರೋಶ ವ್ಯಕ್ತಪಡಿಸಿದ್ದರು.

ಈ ಎಲ್ಲಾ ಜನದ್ರೋಹಿ ಹಾಗೂ ಕ್ರಾಂತಿದ್ರೋಹಿ ಕಾರಣದಿಂದಾಗಿ ಜನ ಹೋರಾಟಕ್ಕೆ ಕಂಟಕನಾದ ಪೊಲೀಸ್ ಮಾಹಿತಿದಾರ, ಕ್ರೂರ ಭೂಮಾಲೀಕ ಕೇಶವಯಡಿಯಾಳನಿಗೆ ಜನಾದೇಶ ಮೇರೆಗೆ ಮರಣದಂಡನೆ ಶಿಕ್ಷೆಯನ್ನು ನಮ್ಮ ಪಕ್ಷದ ಪಿ.ಎಲ್.ಜಿ.ಎ.ಜಾರಿಗೋಳಿಸಿತು. ಈ ಕ್ರಮವನ್ನು ನಾಡಿನ ಎಲ್ಲಾ ಜನತೆ ಎತ್ತಿಹಿಡಿದು, ಪೊಲೀಸ್ ಮಾಹಿತಿದಾರರನ್ನು ಗುರುತಿಸಿ ಶಿಕ್ಷಿಸುತ್ತಾ ಭೂಮಾಲೀಕ ಶೋಷಣೆಯ ವಿರುದ್ಧ ರಾಜಿರಹಿತ ಹೋರಾಟಗಳನ್ನು ನಡೆಸಬೇಕೆಂದು ಮನವಿಮಾಡುತಿದ್ದೇವೆ.

"ಉಳುವವನಿಗೆ ಭೂಮಿ"ಎಂಬ ಘೋಷಣೆಯಡಿ ವ್ಯವಸಾಯಕ್ರಾಂತಿಯನ್ನು ಸಾಕಾರಗೊಳಿಸಲು,ಜನತೆಯ ನಿಜವಾದ ಪ್ರಜಾತಾಂತ್ರಿಕ ರಾಜಕೀಯ ಅಧಿಕಾರಕ್ಕಾಗಿ ನಮ್ಮ ಪಕ್ಷ ಜನರ ಹೆಗಲಿಗೆ ಹೆಗಲಾಗಿ ನಿಂತು  ಹೋರಾಡುತ್ತದೆ.ನಾಡಿನ ಎಲ್ಲಾ ಜನಸಾಮಾನ್ಯರು ಹಾಗೂ ಪ್ರಜಾತಂತ್ರವಾದಿಗಳು ಇದರಲ್ಲಿ ಹೆಚ್ಚು ಹೆಚ್ಚು ಪಾಲ್ಗೋಳ್ಳಬೇಕೆಂದು ಕೋರುತ್ತಿದ್ದೇವೆ.

★ ಕಾ// ಉಮೇಶ್(ಕಿರಣ್),ಕಾ//ಅಜಿತ್ ಕುಸುಬಿ(ಆಕಾಶ್)ರವರ ಕಗ್ಗೊಲೆಗೆ ಕಾರಣನಾದ ಪೊಲೀಸ್ ಮಾಹಿತಿದಾರ ಕೇಶವ ಯಡಿಯಾಳನಿಗೆ ನೀಡಿರುವ ಶಿಕ್ಷೆಯನ್ನು ಎತ್ತಿಹಿಡಿಯೋಣ!

★ ಕಾ//ಉಮೇಶ್,ಕಾ//ಅಜಿತ್ ಕುಸುಬಿಯವರ ಆಶಯಗಳನ್ನು ಈಡೇರಿಸೋಣ!

★ ಎಲ್ಲಾ ಜನದ್ರೋಹಿ,ಕ್ರೂರಭೂಮಾಲೀಕರು ಹಾಗೂ ಪೊಲೀಸ್ ಮಾಹಿತಿದಾರರಿಗೆ ತಕ್ಕ ಪಾಠ ಕಲಿಸೋಣ!

★ ರೈತ,ಕೂಲಿ–ಕಾರ್ಮಿಕರೆಲ್ಲಾ ಒಂದಾಗೋಣ"ಉಳುವವರಿಗೆ ಭೂಮಿ"ಗಾಗಿ ಹೋರಾಡೋಣ!

★ ನೂತನ ಪ್ರಜಾತಾಂತ್ರಿಕ ಕ್ರಾಂತಿಯನ್ನು ಯಶಸ್ವಿ ಗೊಳಿಸೋಣ!

★ ಸಿ.ಪಿ.ಐ (ಮಾವೋವಾದಿ)ಜಿಂದಾಬಾದ್!

ಸಿ.ಪಿ.ಐ(ಮಾವೋವಾದಿ)
ದೃಕ್ಪಥ ಪ್ರದೇಶ
ಕರ್ನಾಟಕ.

ನವಂಬರ್ 2008